ಕಥೆ

# ದೇವರು ಬಂತು



**ಶ್ರುತಿ ಬಿ.ಆರ್.**

ಕಲೆ: ಪ್ರಭಾಕರ ಹೆಗಡೆ

ಮೈ ಮೇಲೆ ನೀರು ಬಿತ್ತೇನೋ ಎಂಬಂತೆ ಧಾರಾಕಾರವಾಗಿ ಬೆವೆತು ಮೂಗಿನ ತುದಿಯಿಂದ ಹನಿ ತೊಟ್ಟಿಕ್ಕುತ್ತಿತ್ತು. ತಲೆಯಾಡಿಸಿದಂತೆಲ್ಲಾ ಬಿಚ್ಚಿದ ಗುಂಗುರು ಮಂಡೆಗೂದಲು ಮುಖದ ಮೇಲೆ ಬಂದು ಹೋಗುತ್ತಿತ್ತು. ಕ್ಷಣ ಕ್ಷಣಕ್ಕೂ ಉಸಿರಾಟದ ವೇಗ ಹೆಚ್ಚುತ್ತಲೇ ಇತ್ತು, ಎದೆ ಏರಿಳಿಯುತ್ತಿತ್ತು. ಕೋಣೆ ತುಂಬಾ ಆವರಿಸುತ್ತಿದ್ದ ಊದಿನಕಡ್ಡಿ ಮತ್ತು ಧೂಪದ ಹೊಗೆ, ನಡು ನಡುವೆ ವಿಚಿತ್ರ ರೀತಿಯ ತಾರಕ ಸ್ವರದ ಹೂಂಕಾರಗಳ ಸದ್ದು. ಹಚ್ಚಿದ್ದ ಹನ್ನೆರಡು ದೀಪಗಳನ್ನು ವೃತ್ತಾಕಾರದಲ್ಲಿಟ್ಟು ಮಧ್ಯ ಕುಳಿತವಳ ಕಡುಗೆಂಪು ಸೀರೆ, ಬಿಚ್ಚುಗೂದಲು, ದೊಡ್ಡ ಕುಂಕುಮ, ಕೆನ್ನೆ ತುಂಬುವಂತೆ ಅರಿಸಿನ, ಕೈತುಂಬಾ ಕೆಂಪು ಗಾಜಿನ ಬಳೆಗಳು, ಲೈಟ್ ಆರಿಸಿದ್ದ ಆ ಕೋಣೆಯೊಳಗೆ ನಾಲ್ಕೂ ಮೂಲೆಗಳಲ್ಲೂ ಉಸಿರು ಬಿಗಿ ಹಿಡಿದು ನಿಂತಿದ್ದವರ ಕೈಕಾಲು ನಡುಗಿಸುತ್ತಿದ್ದವು. ಚಿಕ್ಕ ಮಕ್ಕಳೋ, ಅಳ್ಳೆದೆಯವರೋ ಇದ್ದಿದ್ದರೆ ಹೆದರಿ ಮೂರ್ಛೆ ಬಿದ್ದುಬಿಡುತ್ತಿದ್ದರೇನೋ? ನಾನೇನು ತೀರಾ ಧೈರ್ಯಸ್ಥಳಲ್ಲ, ನನಗೂ ಆ ಕೋಣೆಯಿಂದಾಚೆ ಓಡಿಬಿಡಬೇಕೆನಿಸಿದರೂ, ನಡುಗುತ್ತಿದ್ದ ಕೈಗಳಿಂದ ನನ್ನ ಬಲ ತೋಳನ್ನು ಬಿಗಿಯಾಗಿ ಹಿಡಿದು ನಿಂತಿದ್ದ ಗೀತಾಳಿಂದಾಗಿ ಅಲ್ಲಿಯೇ ನಿಲ್ಲುವಂತಾಗಿತ್ತು. ದೇವರು, ದೆವ್ವ ಯಾವುದನ್ನೂ ಹೆಚ್ಚು ನಂಬದ, ಎರಡನ್ನೂ ಇಷ್ಟಿಷ್ಟೇ ಒಮ್ಮೊಮ್ಮೆ ಮಾತ್ರ ನಂಬುವ, ಇಂಥ ಜಾಗಗಳಿಗೆ ಎಂದೂ ಬಾರದ ನಾನು ಗೀತಾಳ ಕಷ್ಟ ಪರಿಹಾರಕ್ಕಾಗಿ ಬಲವಂತದಿಂದ ಬರುವಂತಾಯಿತು.

ಹನ್ನೆರಡು ವರ್ಷಗಳಿಂದ ಗೀತಾ ನನ್ನ ಸಹೋದ್ಯೋಗಿ ಮತ್ತು ಆತ್ಮೀಯ ಗೆಳತಿ. ನನ್ನ ಮನೆಯ ವಿಚಾರಗಳೆಲ್ಲಾ ಅವಳಿಗೆ, ಅವಳ ಮನೆಯ ವಿಚಾರಗಳೆಲ್ಲಾ ನನಗೆ ಗೊತ್ತಿರುವಂಥದ್ದೆ. ಎರಡು ಪರ್ಸೆಂಟ್ ಬಡ್ಡಿಗಾಗಿ ದೂರದ ನಂಟರೊಬ್ಬರಿಗೆ ತನ್ನ ಇಷ್ಟು ವರ್ಷಗಳ ಉಳಿತಾಯದ ಹತ್ತು ಲಕ್ಷ ರೂಪಾಯಿ ಸಾಲ ಕೊಟ್ಟು, ಐದಾರು ತಿಂಗಳು ಸರಿಯಾಗಿ ಹತ್ತನೇ ತಾರೀಖಿಗೆ ಇಪ್ಪತ್ತು ಸಾವಿರ ಕಂಡು 'ಬ್ಯಾಂಕ್ ಬಡ್ಡಿ ಪ್ರಯೋಜನವಿಲ್ಲ ಕಣೆ, ನೀನು ಸುಮ್ನೆ ಎಫ್.ಡಿ. ಇಡೋ ಬದಲು ಯಾರಿಗಾದರೂ ಬಡ್ಡಿಗೆ ಸಾಲ ಕೊಡು. ನೋಡು, ಇಪ್ಪತ್ತು ಸಾವಿರ ಬಂದರೆ ಇಡೀ ತಿಂಗಳಿಗೆ ಮನೆ ಖರ್ಚು ಅದರಲ್ಲೇ ಆಗುತ್ತೆ, ಸಂಬಳವೆಲ್ಲ ಉಳಿಯುತ್ತೆ' ಎಂದು ನನಗೂ ಬುದ್ಧಿ ಹೇಳಿದ್ದಲ್ಲದೆ, ಮತ್ತೊಮ್ಮೆ ಅವಳ ದೂರದ ನಂಟರು ಹಣ ಬೇಕೆಂದರೆ ನನ್ನಿಂದಲೇ ಕೊಡಿಸಿ, ನನಗೂ ತಿಂಗಳಿಗೆ ಎರಡು ಪರ್ಸೆಂಟು ಬಡ್ಡಿ ಕೊಡಿಸುವುದಾಗಿ ಹೇಳಿದ್ದಳು. ಅವಳ ಸಂಬಂಧಿ ಇವಳಿಂದ ಎರಡು ಪರ್ಸೆಂಟಿಗೆ ಸಾಲ ಪಡೆದು ನಾಲ್ಕೋ ಐದೋ ಪರ್ಸೆಂಟಿಗೆ ಬೇರೆಯವರಿಗೆ ಸಾಲ ಕೊಡುತ್ತಾರಂತೆ. ಈ ವ್ಯವಹಾರದಲ್ಲಿ ಎಡವಟ್ಟಾದರೆ... ಎಂದು ನಾನು ಅಪನಂಬಿಕೆ ತೋರಿದಾಗ, 'ಖಂಡಿತಾ ಇಲ್ಲ, ಅವರು ಪಕ್ಕಾ ವ್ಯವಹಾರಸ್ಥರು. ಮೋಸ ಆಗೋಕೆ ನಾವೇನು ಗೊತ್ತಿಲ್ಲದೋರಿಗೆ ಸಾಲ ಕೊಟ್ಟಿಲ್ವಲ್ಲ? ಅವರು ಯಾರಿಗಾದರೂ ಸಾಲ ಕೊಟ್ಕೊಳ್ಳಿ, ನಮಗೆ ಇವರೇ